ಕಲಘಟಗಿಯಲ್ಲಿ ಮಿನಿ ವಿಧಾನ ಸೌಧ ನಿರ್ಮಾಣ ಕಾರ್ಯದ ಪ್ರಾರಂಭ

791 - ಶ್ರೀ ಪಿ.ಸಿ. ಸಿದ್ದಗೌಡರ್ (ಕಲಘಟಗಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯ ಕಲಘಟಗಿಗೆ ಮಿನಿ ವಿಧಾನಸೌಧ ಮಂಜೂರಾಗಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ, ಇದುವರೆವಿಗೂ ಈ ಮಿನಿ ವಿಧಾನಸೌಧ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸದಿರಲು ಕಾರಣವೇನು?

ಇ) ಯಾವಾಗ ಈ ಮಿನಿ ವಿಧಾನಸೌಧ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಹೌದು.

ಆ) 1989-90ನೇ ಸಾಲಿನಲ್ಲಿ ಈ ಕಾಮಗಾರಿಗೆ 6.00 ಲಕ್ಷ ರೂ.ಗಳ ಅನುದಾನ ಒದಗಿಸಿದ್ದು ಇದು 1989-90ನೇ ಸಾಲಿನ ಅನುಸೂಚಿತ ದರವಾಗಿರುತ್ತದೆ. ಲೋಕೋಪಯೋಗಿ ಇಲಾಖೆಯು ಸೂಚಿಸಿರುವಂತೆ ಪ್ರಸ್ತುತ ಆರ್ಥಿಕ ವರ್ಷದ ಅನುಸೂಚಿತ ದರಗಳ ಮೇರೆಗೆ ಪ್ರಸ್ತಾವನೆಯನ್ನು ಕೋರಲಾಗಿದ್ದು, ಇದರಿಂದಾಗಿ ಮಿನಿ ವಿಧಾನಸೌಧ ಕಾರ್ಯ ನಿರ್ಮಾಣ ಇನ್ನೂ ಪ್ರಾರಂಭಿಸಿರುವುದಿಲ್ಲ.

ಇ) ಲೋಕೋಪಯೋಗಿ ಇಲಾಖೆ ಮತ್ತು ಆರ್ಥಿಕ ಇಲಾಖೆಗಳೊಂದಿಗೆ ಸಮಾಲೋಚಿಸಿ ಆದಷ್ಟು ಜಾಗ್ರತೆ ಮಿನಿ ವಿಧಾನಸೌಧ ಕಟ್ಟಡ ಕಾರ್ಯವನ್ನು ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯ ನೈರ್ಮಲ್ಯ ವ್ಯವಸ್ಥೆ ತೀರಾ ಕೆಟ್ಟಿರುವ ಬಗ್ಗೆ

794 - ಶ್ರೀ ಗೋಪಿನಾಥ್ ಆರ್. ಸಾಂದ್ರ (ಹುಬ್ಬಳ್ಳಿ): ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರಸಭೆಯ ನೈರ್ಮಲ್ಯ ವ್ಯವಸ್ಥೆ ತೀರಾ ಕೆಟ್ಟಿದೆ ಎನ್ನುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಸೊಳ್ಳೆಗಳನ್ನು ನಿರ್ಮೂಲನ ಮಾಡಲು ತೆಗೆದುಕೊಂಡ ಕ್ರಮಗಳಾವುವು?

ಇ) ಹುಬ್ಬಳ್ಳಿ-ಧಾರವಾಡ ಮಹಾನಗರಸಭೆಯಲ್ಲಿ ಕಸ ಸಾಗಿಸಲು ಇರುವ ವಾಹನಗಳೆಷ್ಟು? ಮತ್ತು ಅವು ಕಸ ಸಾಗಿಸಲು ಸಾಕಾಗುತ್ತವೆಯೇ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

ಅ) ಇಲ್ಲ.

ಆ) 'ಅಬೇಟ್'ನ್ನು ಸೊಳ್ಳೆ ನಿರ್ಮೂಲನೆಗಾಗಿ ನಿಂತ ಕೊಳಚೆ ನೀರಿನ ಮೇಲೆ ನಿಯಮಿತವಾಗಿ ಸಿಂಪಡಿಸಲಾಗುತ್ತಿದೆ. ದೊಡ್ಡ ದೊಡ್ಡ ನಾಲೆಗಳನ್ನು ಶುಚ್ಛಗೊಳಿಸುವುದು, ತಗ್ಗು ಪ್ರದೇಶಗಳನ್ನು ಮುಚ್ಚಿ ಸಮಗೊಳಿಸುವುದು, ಪಕ್ಕಾ ಗಟಾರಗಳನ್ನು ಕಟ್ಟುವುದು ಮತ್ತು ನಿರುಪಯೋಗಿ ಭಾವಿಗಳನ್ನು ಮುಚ್ಚುವುದು ಮುಂತಾದ ಇಂಜಿನಿಯರಿಂಗ್ ಕೆಲಸಗಳನ್ನು ಹಣದ ಅನುಕೂಲತೆ ನೋಡಿಕೊಂಡು ಕೈಗೆತ್ತಿಕೊಳ್ಳಲಾಗುತ್ತಿದೆ.

ಇ) ಹುಬ್ಬಳ್ಳಿ-ಧಾರವಾಡ ಮಹಾನಗರಸಭೆಯಲ್ಲಿ ಕಸ ಸಾಗಿಸಲು 14 ವಾಹನಗಳಿವೆ. ಮತ್ತೆರಡು ವಾಹನಗಳನ್ನು ಈ ವರ್ಷಕೊಳ್ಳಲು ಕ್ರಮತೆಗೆದುಕೊಳ್ಳಲಾಗುತ್ತಿದೆ.